ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗಕ್ಕೆ 'ರಾಜ್ಯ ವನ್ಯಜೀವಿ ಮಂಡಳಿ' ಹಸಿರುನಿಶಾನೆ ತೋರಿದೆ. ಈ ಹಸಿರುನಿಶಾನೆ ನಾಡಿನ ಜೀವನಾಡಿ ಪಶ್ಚಿಮಘಟ್ಟದ ಪಾಲಿಗೆ ಅರಗಿಸಿಕೊಳ್ಳಲಾಗದ ಕೊಡಲಿಪೆಟ್ಟಾಗಲಿದೆ. ಹೆದ್ದಾರಿಗಳು ಹಾಗೂ ಪರ್ಯಾಯ ರೈಲು ಮಾರ್ಗಗಳಿರುವಾಗ, ಘಟ್ಟವನ್ನು ಸೀಳಿ ಹೊಸ ಮಾರ್ಗ ರೂಪಿಸುವ ಅವಿವೇಕದ ನಿರ್ಧಾರ, ಪರಿಸರಕ್ಕೆ ಕೊಡುವ ಪೆಟ್ಟಷ್ಟೇ ಅಲ್ಲ, ರೈತನ ಬಾಳಿಗೆಳೆಯುವ ಬರೆಯೂ ಹೌದು. ಕಾನೂನಿನ ಕಣ್ಣಿಗೆ ಮಣ್ಣೆರಚಿ ಅನುಮತಿ ಪಡೆಯುವ ಉದ್ಯಮಗಳ ಚಾಳಿಗೆ ಸರ್ಕಾರವೂ ಇಳಿದುಬಿಟ್ಟಿರುವುದರ ವಿರುದ್ಧ ಒಕ್ಕೊರಲ ಧ್ವನಿ ರೂಪುಗೊಳ್ಳಬೇಕಾಗಿದೆ.

■ ಕೇಶವ ಎಚ್. ಕೊರ್ಸೆ

ಚಿತ್ರಗಳು: ದಿನೇಶ್ ಹೆಗಡೆ ಮಾನೀರ್



ಹಳವಳ್ಳಿ ಸಮೀಪದಲ್ಲಿ ಬೇಡ್ತಿ ನದಿಯ ಹರಿವಿನ ವಿಹಂಗಮ ನೋಟ...
ಈ ಸುಂದರ ದಟ್ಟ ಕಾಡಿನ ಜೀವವೈವಿಧ್ಯದ ಎದೆಯ ಮೇಲೆಯೇ ಹುಬ್ಬಳ್ಳಿ – ಅಂಕೋಲಾ ರೈಲು ಹಳಿಯ ಹೊಲಿಗೆ ಬೀಳಲಿದೆ
ಚಿತ್ರ: ಗೋಪಿ ಜೋಲಿ

# ಬೇಡ್ತಿ ಕಣಿವೆ ಛಿನ್ನ, ಭವಿಷ್ಯ ಛಿದ್ರ!